VIJAYAKUMAR KANNUR
Digitally signed by VIJAYAKUMAR KANNUR
Date: 2026.08.18 16:30:54 +0530



**ಅಸಲು ದಾವಾ ಸಂಖ್ಯೆ. 341/2023**
**ಡಿ. ಡಬ್ಲ್ಯೂ.01**

**ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 18.08.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ SGC ವಕೀಲರಿಂದ**

ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುವುದಿಲ್ಲ. ನಮ್ಮ ವಕೀಲರಿಗೆ ಮಾಹಿತಿ ನಾವೇ ನೀಡಿರುವೆವು. ನನ್ನ ಸ್ವಂತ ಊರು ರಾಮದುರ್ಗ ತಾಲೂಕಿನ ಹೊನ್ನಾಗರ ಗ್ರಾಮ. ನನ್ನ ವಿವಾಹವಾಗಿ ಸುಮಾರು 20 ವರ್ಷಗಳಾಗಿರುವವು. ನಾನು ನನ್ನ ವಿವಾಹವಾದಾಗಿನಿಂದ ನನ್ನ ಗಂಡನ ಮನೆಯಲ್ಲೇ ವೈವಾಹಿಕ ಜೀವನ ನಡೆಸುತ್ತಾ ಇರುವೆನು. ನನ್ನ ಗಂಡನ ತಂದೆ ವಿಠಲ ಮಾಳಿ ಮೃತ ಪಟ್ಟು ಸುಮಾರು 18 ವರ್ಷಗಳಾಗಿರುವವು. ವಾದಿ ಈ ದಾವೆಯನ್ನು ಆಸ್ತಿಯ ವಿಷಯವಾಗಿ ದಾಖಲು ಮಾಡಿರುವನು. ಈ ದಾವಾ ಸಮನ್ಸ ಜಾರಿಯಾದ ನಂತರ ನಮ್ಮ ವಕೀಲರ ಮೂಲಕ ಲಿಖಿತ ಪತ್ರ ಸಲ್ಲಿಸಿದ್ದು ನಮ್ಮ ಪಾಲಿನ ಆಸ್ತಿ ನಮಗೆ ಬೇಕು ಎಂದು ಅದರಲ್ಲಿ ಹೇಳಿ ಬರೆಸಿರುವೆವು.

2. ನಮ್ಮ ಮನೆತನಕ್ಕೆ ಎರಡು ಶಿರೋಳ ಗ್ರಾಮದಲ್ಲಿ, ಒಂದು ಸೋರಗಾಂವ ಗ್ರಾಮದಲ್ಲಿ ಒಂದು ಮೂರು ಜಮೀನಗಳು ಇರುವವು ಎಂದರೆ ಸರಿ. ಶಿರೋಳ ಗ್ರಾಮದಲ್ಲಿ 4 ಮನೆಯ ಆಸ್ತಿಗಳು ಇರವವು ಎಂದರೆ ಸರಿ. ಶಿರೋಳ ಗ್ರಾಮದ ಸರ್ವೆ ನಂಬರ್ 101/5 ಹಾಗೂ 165/1 ರ ಜಮೀನಿಗೆ ವಾದಿ ನನ್ನ ಹಾಗೂ ಉಳಿದ ಪ್ರತಿವಾದಿಯರ ಹೆಸರುಗಳು ಜಂಟಿಯಾಗಿ ದಾಖಲಾಗಿರುವವು ಎಂದರೆ ಸರಿ. ನನ್ನ ಲಿಖಿತ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಶಿರೋಳ ಗ್ರಾಮದ ಜಮೀನುಗಳಲ್ಲಿ ಮಾತ್ರ ಪಾಲು ವಾಟ್ನಿಯಾಗಿರುವುದಿಲ್ಲ, ಸೋರಗಾಂವ ಗ್ರಾಮದ ಜಮೀನು ನಮ್ಮ ಸ್ವಂತ ಆಸ್ತಿಯಾಗಿರುವುದು. ಸೋರಗಾಂವ ಗ್ರಾಮದ ಸರ್ವೆ ನಂಬರ್ 184/3 ರ ಜಮೀನು 2015 ರಲ್ಲಿ ನನ್ನ ಗಂಡ ಖರೀದಿ ಮಾಡಿರುವರು. ನನ್ನ ವಿವಾಹವಾಗಿ ಗಂಡನ ಮನೆಗೆ ಬಂದ ನಂತರ ನಮ್ಮ ಮನೆತನದ ಹಿರಿತನ ನನ್ನ ಗಂಡನ ತಂದೆ ವಿಠಲ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮಾವ ವಿಠಲ ಮೃತ ಪಟ್ಟ ನಂತರ ಮನೆತನದ ಹಿರಿತನ ನನ್ನ ಗಂಡ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನನ್ನ ಅತ್ತೆಯಾದ ತುಳಜವ್ವ ಮಾಡುತ್ತಿದ್ದವು. ತುಳಜವ್ವ ಮೃತ ಪಟ್ಟ ನಂತರ ಮನೆತನದ ಹಿರಿತನ ಯಾರು

ಮಾಡುತ್ತಾ ಬಂದಿರುವರು ಎಂಬ ಪ್ರಶ್ನೆಗೆ ಸಾಕ್ಷಿ ತಾವು ಈ ಮೊದಲೇ ತಮ್ಮ ಕುಟುಂಬ ಸಮೇತ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿರುವುದಾಗಿ ಎಂದು ಉತ್ತರಿಸುವರು. ನನ್ನ ಗಂಡ ಗಣಪತಿ ಮೃತ ಪಟ್ಟು ಈಗ 4 ವರ್ಷಗಳಾಗಿರುವವು. ನನ್ನ ಗಂಡ ಮೃತ ಪಡುವ ವವರೆಗೂ ನಾನು, ವಾದಿ, ನನ್ನ ಗಂಡ ಮತ್ತು ಉಳಿದ ಕುಟುಂಬ ಸದಸ್ಯರು ಕೂಡಿಯೇ ವಾಸವಾಗಿದ್ದೇವು ಎಂದರೆ ಸರಿಯಲ್ಲ.

3. ನನ್ನ ಗಂಡ ತನ್ನ ಜೀವಿತ ಕಾಲದಲ್ಲಿ ಒಕ್ಕಲತನ ಮತ್ತು ಹಮಾಲಿ ಕೆಲಸ ಮಾಡುತ್ತಿದ್ದನು. ನನ್ನ ಗಂಡ ಬೇರೆಯವರ ಜಮೀನುಗಳಲ್ಲಿ ಒಕ್ಕಲತನ ಮಾಡುತ್ತಿದ್ದನು. ನನ್ನ ಗಂಡ ಬೇರೆಯವರ ಜಮೀನುಗಳನ್ನು ಪಾಲಿನ ಆಧಾರದ ಮೇರೆಗೆ ಸಾಗುವಳಿ ಮಾಡುತ್ತಿದ್ದನು, ಆದರೆ ಆ ಜಮೀನುಗಳ ಮಾಲೀಕರ ಬಗ್ಗೆ ನನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ. ನನ್ನ ಗಂಡ ಹಮಾಲಿ ಕೆಲಸ ಮುಧೋಳ, ರಾಮದುರ್ಗ, ಸವದತ್ತಿ ಪಟ್ಟಣಗಳಲ್ಲಿ ಮಾಡುತ್ತಿದ್ದನು. ಈ ಸವದತ್ತಿಗೆ ಹೋಗಿ ಬಂದು ಮಾಡುತ್ತಿದ್ದನು ಎಂಬ ಪ್ರಶ್ನೆಗೆ ಸಾಕ್ಷಿ ಒಮ್ಮೆ ಕೆಲಸಕ್ಕೆ ಹೋದರೆ 2 ದಿನಗಳ ವರೆಗೆ ವಾಸವಾಗಿರುತ್ತಿದ್ದನು, ನಂತರ ಹೋಗಿ ಬಂದು ಮಾಡುತ್ತಿದ್ದನು ಎಂದು ಉತ್ತರಿಸುವರು.ನನ್ನ ಗಂಡ ಹಮಾಲಿ ಕೆಲಸ ಮತ್ತು ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಗಂಡ ನಮ್ಮ ಜಮೀನುಗಳ ಸಾಮೂಹಿಕ ಸಾಗುವಳಿ ಮಾಡುತ್ತಿರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ